(ಫ್ರಾಸಾ-1) ಪ್ರಮಾಣ ವಚನ ಭೋಧಿಸಿದ ದಿನಾಂಕಃ 22-08-2025

ಪಾಟೀ ಸವಾಲು ಆರೋಪಿತನ ಪರವಾಗಿ,ಶ್ರೀ. ಸಿ.ಎಸ್.ಎಮ್. ವಕೀಲರಿಂದ

6. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ರಾಜಿ ಡಿಕ್ರಿಯನ್ನು ಅರ್ಜಿಯೊಂದಿಗೆ ಯಾವ ದಿನಾಂಕದಂದು ತಹಶೀಲ್ದಾರ ಕಚೇರಿಗೆ ಸಲ್ಲಿಸಿರುತ್ತೇನೆಂದು ನಿಖರವಾಗಿ ಹೇಳಲು ನೆನಪಿಲ್ಲ. ಈ ಪ್ರಕರಣದ ದೂರು ನೀಡುವ ಸುಮಾರು 15 ದಿನಗಳ ಹಿಂದೆ ಇರಬಹುದು ಎಂದು ಸಾಕ್ಷಿ ನುಡಿಯತ್ತಾರೆ. ಆರ್ ಐ ರವರು ನನ್ನನ್ನು ಈ ಪ್ರಕರಣದ ದೂರು ನೀಡುವ ಒಂದು ವಾರದ ಮುನ್ನ ಕರೆಯಿಸಿದ್ದು ಯಾವ ದಿನಾಂಕ ಅಂತಾ ನೆನಪಿಲ್ಲ. ಅರ್ಜಿ ಸಲ್ಲಿಸಿದ 45 ದಿನಗಳ ನಂತರ ಖಾತೆ ಬದಲಾವಣೆ ಆಗುತ್ತದೆ ಎಂದರೆ ಸರಿ.

7. ಈ ಪ್ರಕರಣದಲ್ಲಿ ನಾನು ದಿಃ 13.04.2018 ರಂದು ಖಾತಾ ಬದಲಾವಣೆಗೆ ಅರ್ಜಿಸಲ್ಲಿಸಿದ್ದೆ ಎಂದರೆ ಸರಿ. ಅದರಂತೆ ದಿಃ 24.05.2018 ರಂದು ಖಾತಾ ಬದಲಾವಣೆ ಆದೇಶವಾಗಿ ಪಹಣಿಯಲ್ಲಿ ನಮೂದು ಇರುತ್ತದೆ ಎಂದರೆ ನನಗೆ ಖಾತಾ ಬದಲಾವಣೆ ಆದೇಶ ಆದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ದಿಃ 24.05.2018 ರಂದು ತಹಶೀಲ್ದಾರ ಕಚೇರಿಗೆ ಹೋಗಿ ಖಾತೆ ಬದಲಾವಣೆ ಆದ ಬಗ್ಗೆ ನೋಡಿಲ್ಲ. ನಾನು ನೀಡಿದ ದೂರಿನಲ್ಲಿ ತಹಶೀಲ್ದಾರ ಕಚೇರಿಯಲ್ಲಿ ಅರ್ಜಿಸಲ್ಲಿಸಿದ ದಿನಾಂಕ ಮತ್ತು ಆರ್ ಐ ನನ್ನನ್ನು ಕರೆದ ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ನಾನು ಖಾತಾ ಬದಲಾವಣೆ ಆರ್ಜ ಸಲ್ಲಿಸಿದ ನಂತರ ಈ ಪ್ರಕರಣದ ದೂರು ದಾಖಲಿಸುವ ಒಂದು ದಿನದ ಹಿಂದೆ ಖಾತಾ ಬದಲಾವಣೆ ಆದೇಶ ಆಗಿತ್ತು ಎಂದರೆ ನನಗೆ ಗೊತ್ತಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ದಿಃ 24.05.2018 ರಂದು ಆರೋಪಿತರಿಗೆ ಕರೆ ಮಾಡಿದಾಗ ಅವರು ಖಾತೆ ಬದಲಾವಣೆ ಆಗಿದೆ ಪಹಣಿ ತೆಗೆದುಕೊಂಡು ಹೋಗು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ಗ್ರಾಮಸ್ಥರು ಆರೋಪಿತನ ಮೇಲೆ ದ್ವೇಶ ಇಟ್ಟುಕೊಂಡು ಈ ಪ್ರಕರಣದಂತೆ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

8. ಸಾಕ್ಷಿಗೆ ಒಂದು ಇಲಾಖಾ ವಿಚಾರಣೆಯ ದೃಢೀಕೃತ ನಕಲಿನ ಸಾಕ್ಷ್ಯವನ್ನು ತೋರಿಸಿ ತಮ್ಮ ಸಹಿ ಗುರುತಿಸಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು.

9. ನಾನು ಇಲಾಖಾ ವಿಚಾರಣೆಯ ಸಮಯದಲ್ಲಿ ಆರೋಪಿ ನನ್ನಿಂದ ಲಂಚದ ಹಣ ಪಡೆದಿಲ್ಲ ಎಂದು ಹೇಳಿರುತ್ತೇನೆ ಎಂದರೆ ನೆನಪಿಲ್ಲ.

10. ದೂರನ್ನು ನಾನು ಕೆಂಭಾವಿಯಲ್ಲಿನ ಪರಿಚಯಸ್ತರ ಬಳಿ ಗಣೀಕರಣ ಮಾಡಿಸಿರುತ್ತೇನೆ. ದಿಃ 24.05.2018 ರಂದು ಸದರಿ ದೂರನ್ನು ಗಣೀಕರಣ ಮಾಡಲಾಗಿದೆ ಎಂದು ದೂರಿನ ಮೇಲೆ ನಮೂದಿಸಿಲ್ಲ.

11. ನಾನು ದಿಃ **25.05.2018** ರಂದು ಬೆಳಗ್ಗೆ **8.30** ಗಂಟೆಗೆ ಎ ಸಿ ಬಿ ಕಚೇರಿಗೆ ಹೋದೆನು. ನನ್ನ ದೂರಿನಲ್ಲಿ ಅದೇ ದಿನ ಬೆಃ **11.20** ಕ್ಕೆ ನಾನು ಆರೋಪಿತನಿಗೆ ದೂರವಣಿ ಕರೆ ಮಾಡಿದ್ದೆ ಎಂದು ನಾನು ಬರೆಸಿಲ್ಲ. ನಾನು ದೂರಿನಲ್ಲಿ ದಿಃ **24.05.2018** ಎಂದೆ ಬರೆಸಿದ್ದೆ. ಅದು ಬೆರಳಚ್ಚು ಮಾಡುವಾಗ ದೋಶ ಆಗಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ದಿಃ **25.05.2018** ರಂದು ಬೆಃ **8.30** ಎ ಸಿ ಬಿ ಕಚೇರಿಗೆ ಹೋದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ **25.05.2018** ರಂದು ಬೆಃ **11.00** ರ ನಂತರ ದೂರನ್ನು ಎ.ಸಿ.ಬಿ ಕಚೇರಿರಯಲ್ಲಿ ಬೆಳಚ್ಚು ಮಾಡಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

12. ನನ್ನ ಕೆಲಸ ದಿಃ **24.05.2018** ರಂದೇ ಆರೋಪಿಯ ಬಳಿ ಪೂರ್ಣಗೊಂಡಿದ್ದು ನಾನು ದೂರು ನೀಡುವ ದಿಃ **25.05.2018** ರಂದು ಯಾವುದೇ ಕೆಲಸ ಬಾಕಿ ಇರಲಿಲ್ಲ ಎಂದರೆ ಸಾಕ್ಷಿ ಕೆಲಸದ ಕಡತ ಆರೋಪಿಯ ಬಳಿ ಇತ್ತು ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುತಿಸಿ ಖರ್ಚು ಸಹಿತ ನೀಡಲಾಯಿತು)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.